**ಸಾಕ್ಷಿಗೆ ತೆಲುಗು ಭಾಷೆ ಹೊರತುಪಡಿಸಿ ಬೇರೆ ಭಾಷೆ ಬರುವುದಿಲ್ಲವೆಂದು ಹೇಳಿದ ಕಾರಣ ಶ್ರೀಮತಿ ಎಸ್.ಜಿ. ವಕೀಲರನ್ನು ಭಾಷಾಂತಕಾರರನ್ನಾಗಿ ನೇಮಿಸಿ ಅವರಿಗೂ ಮತ್ತು ಅವರ ಮೂಲಕ ಸಾಕ್ಷಿಗೆ ದಿನಾಂಕ 22.11.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 1 ನೇ ಎದುರುದಾರರ ಪರ ಶ್ರೀ ವಿ.ಆರ್ ಎಂ. ವಕೀಲರಿಂದಃ**

ನನ್ನ ತಂದೆ ತಾಯಿಗೆ ಇಬ್ಬರು ಮಕ್ಕಳು. ಅವರುಗಳೆಂದರೆ ಕೆ.ರೇಣುಕಾ ಮತ್ತು ನಾನು. ರೇಣುಕಾರವರಿಗೆ ವಿವಾಹ ಆಗಿದೆ ಎಂದರೆ ಸರಿ. ಅವರು ತನ್ನ ಪತಿಯ ಮನೆಯಲ್ಲಿ ವಾಸ ಇರುತ್ತಾರೆ. ನಾನು ಬಿ.ಟೆಕ್ ಓದಿರುತ್ತೇನೆ. ನಾನು ಹೈದರಾಬಾದ್ ನ ಖಾಸಗಿ ಕೆಂಪೆನಿಯಲ್ಲಿ ಉದ್ಯೋಗ ಆಗಿರುತ್ತೇನೆ. ನಾನು ಸಹ ವಿವಾಹಿತನಾಗಿರುತ್ತೇನೆ. ನನಗೆ ಅಜ್ಜ ಮತ್ತು ಅಜ್ಜಿ ಜೀವಂತ ಇರುವುದಿಲ್ಲ.

ಅಪಘಾತವನು ಕಣ್ಣಾರೆ ನೋಡಿರುವುದಿಲ್ಲ. ಅಪಘಾತದ ಬಗ್ಗೆ ಭಾವ ಮಾಹಿತಿ ನೀಡಿರುತ್ತಾರೆ, ಅವರ ಹೆಸರು ಧರ್ಮಕೇಶವ. ಅವರೂ ಸಹ ಅಪಘಾತವನ್ನು ನೋಡಿರುವುದಿಲ್ಲ. ಕಣ್ಣಾರೆ ಅಪಘಾತವನ್ನು ನೋಡಿರುವವರನ್ನು ನ್ಯಾಯಾಲಯಕ್ಕೆ ಸಾಕ್ಷ್ಯ ಮಾಡಿಸಲು ತೊಂದರೆ ಇಲ್ಲ. ಅಪಘಾತ ಸ್ಥಳಕ್ಕೆ ನಂತರ ಹೋಗಿರುತ್ತೇನೆ. ಅಪಘಾತ ಸ್ಥಳದಲ್ಲಿ ನಾನು ಹೋದಾಗ ವಾಹನ ಇರಲಿಲ್ಲ. ಅಪಘಾತವಾದ ಸ್ಥಳ ಚಿತ್ತೂರು ಪಲಮನೇರ್ ರಸ್ತೆ ಎಂದರೆ ಮದ್ರಾಸ್, ಬೆಂಗಳೂರು -ತಿರೂಪತಿ ಹೆದ್ದಾರಿ ಆಗಿರುತ್ತದೆ. ರಸ್ತೆಯ ಮಧ್ಯದಲ್ಲಿ ವಿಭಜಕ ಇರುವುದಿಲ್ಲ. ಅಪಘಾತ ದಿನದಂದು ನನ್ನ ತಂದೆ ಪಲಮನೇರ್ ನಿಂದ ಚಿತ್ತೂರು ಕಡೆಗೆ ಬರುತ್ತಿದ್ದರು. ನಕ್ಷೆಯ ಪ್ರಕಾರ ಅಪಘಾತ ರಸ್ತೆಯ ಮಧ್ಯದಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿ ಮುಂದುವರೆದು ತಿರುವುನಲ್ಲಿ ಆಗಿರುತ್ತದೆ ಎಂದು ಹೇಳುತ್ತಾರೆ. ನನ್ನ ತಂದೆ ಹೋಗುತ್ತಿದ್ದ ದ್ವಿಚಕ್ರ ವಾಹನಕ್ಕೆ ಬಂಪರ್ ಜಖಂ ಆಗಿರುತ್ತದೆ. ಐಎಂವಿ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಎಐಆರ್ ವರದಿಯಲ್ಲಿ ಯಾವುದೇ ಜಖಂಗಳು ಕಂಡುಬಂದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಅಪಘಾತ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಆ ದಿನ ಅತೀವೇಗ ಮತ್ತು ಅಜಾಗೂಕತೆಯಿಂದ ದ್ವಿಚಕ್ರ ಚಾಲನೆ ಮಾಡಿ ಏಕಾಏಕಿ ರಸ್ತೆಯ ಮಧ್ಯಭಾಗಕ್ಕೆ ಬಂದಿದ್ದರಿಂದ

ಅಪಘಾತಆಗಿರುತ್ತದೆ ಎಂದರೆ ಸರಿಯಲ್ಲ. ಈ ಅಪಘಾತದಲ್ಲಿ ಲಾರಿ ಚಾಲಕನ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ಲಾರಿ ಚಾಲಕನ ವಿರುದ್ದ ಸುಳ್ಳು ದೂರು ನೀಡಿ ದಾಖಲೆ ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ತಂದೆಯವರು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ರಸ್ತೆ ಮಧ್ಯದಲ್ಲಿ ಮರಣ ಹೊಂದಿರುತ್ತಾರೆ. ರೂ. ಎರಡು ಲಕ್ಷ ವೈದ್ಯಕೀಯ ಖರ್ಚುಗಳಿಗೆ ಮತ್ತು ಇತರೆ ಖರ್ಚುಗಳಿಗೆ ಆಗದೇ ಇದ್ದರೂ ಸಹ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ರೂ. 20 ಸಾವಿರ ವರಮಾನ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮರಣ ಹೊಂದುವ ಕಾಲಕ್ಕೆ 70 ವರ್ಷಕ್ಕಿಂತ ಜಾಸ್ತಿ ವಯಸ್ಸಾಗಿತ್ತು ಎಂದರೆ 69 ವರ್ಷ ವಯಸ್ಸಾಗಿತ್ತು. ನನ್ನ ತಂದೆ ನನ್ನ ಮೇಲೆ ಅವಲಂಬಿತರಾಗಿದ್ದರು ಮತ್ತು ನಾನು ಮತ್ತು 3ನೇ ಅರ್ಜಿದಾರರು ಅವರ ಮೇಲೆ ಅವಲಂಬಿತರಾಗಿಲಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 2ನೇ ಎದುರುದಾರರ ಪರ ವಕೀಲರಿಂದಃ**

2ನೇ ಎದುರುದಾರರು ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು. ಗೈರು ಹಾಜರಾಗಿದ್ದರಿಂದ ಪಾಟೀಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**
**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**